ನನ್ನನ್ನು ನೋಡಿದ ಎಲ್ಲರೂ ನಿಂತಲ್ಲೇ ನಿಂತರು. ಅವರು ನನ್ನನ್ನು ವಿಶೇಷ ದೃಷ್ಟಿಯಿಂದ, ಭಾವನೆಯಿಂದ ನೋಡುತ್ತಿದ್ದಾರೆ. ನಾನು ಇಪ್ಪತ್ತೆಂಟು ಗಂಟೆಗಳ ಕಾಲ ರಾತ್ರಿಯೆಲ್ಲಾ ನಡೆದು ನೀನಾಳಿಗೆ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸಲು ಬಂದಿರುವ ವಿಷಯ ಬಹುಶಃ ಎಲ್ಲರಿಗೂ ತಿಳಿದಿದೆ.

ನಾನು ಕೈಜೋಡಿಸಿ ಎಲ್ಲರನ್ನೂ ಶ್ರದ್ಧೆಯಿಂದ ಅಭಿನಂದಿಸಿದೆ. ಶೀಲಾದೇವಿಯವರು ನನಗೆ ಮೆಲ್ಲನೆ ಪ್ರೀತಿ ಮತ್ತು ವಿನಯದಿಂದ ಹೇಳಿದರು, ‘ಪಾಲ್, ನೀನು ಮಾಡಿದ ಕಾರ್ಯವನ್ನು ಒಬ್ಬ ನಿಜವಾದ ಪ್ರೇಮಿಯೇ ಮಾಡಲು ಸಾಧ್ಯ. ನೋಡು, ನೀನು ದಿನಪತ್ರಿಕೆಯ ಮುಖ್ಯ ಸಮಾಚಾರದಲ್ಲಿದ್ದೀಯ’.

ಜೊಹಾನಾ ಕೂಡಲೇ ನನಗೆ ಪತ್ರಿಕೆಗಳ ಹೆಡ್‌ಲೈನ್ ಓದಿ ಹೇಳಿದಳು.

‘ವ್ಯಕ್ತಿಯೊಬ್ಬ ರಾತ್ರಿಯೆಲ್ಲಾ ನಡೆದು ತನ್ನ ಪ್ರೇಯಸಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲು ಹೊರಟ...’

‘ಪ್ರೇಮಿಯ ಹೆಜ್ಜೆಗಳು ಡೆನ್ಮಾರ್ಕ್‌ನ ನೆಲದಲ್ಲಿ ತೀರ್ಥಯಾತ್ರೆಯ ಮಾರ್ಗವನ್ನು ಅರಸಿದವು...’

‘ಪ್ರೇಮಿಯ ಪಾದಯಾತ್ರೆ ಹೋಲ್ಟೆಯಿಂದ ಸ್ಲೆಯೆಲ್ಸೆವಾಯ್‌ವರೆಗೆ...’

ನಾನು ಮೀಡಿಯಾಗಳಲ್ಲಿ ಬಂದಿದ್ದೇನೆ. ಕರೀನಾ ಪತ್ರಿಕೆಯೊಂದನ್ನು ನನ್ನ ಕೈಗೆ ಕೊಟ್ಟಳು. ಅದರಲ್ಲಿ ರಾತ್ರಿಯ ಅಂಧಕಾರದಲ್ಲಿ, ತೆರೆದ ಆಗಸದ ಕೆಳಗೆ, ದೇವಸ್ಥಾನದ ರಸ್ತೆಯನ್ನರಸುತ್ತಿದ್ದ ನನ್ನ ಫೋಟೊ ಪ್ರಕಟವಾಗಿತ್ತು.

ನನ್ನ ತುಟಿಗಳಲ್ಲಿ ಮುಗುಳ್ನಗೆ ಮೂಡಿತು. ಅಷ್ಟರಲ್ಲಿ ಪರಂಪರಾಗತ ವೇಷದಲ್ಲಿ ಪೂಜಾರಿಯೊಬ್ಬರು ನನ್ನೆಡೆಗೆ ಬಂದು, ನನ್ನ ಕೊರಳಿಗೆ ತಾಜಾ ಚೆಂಡುಮಲ್ಲಿಗೆ ಹೂವುಗಳ ಹಾರವನ್ನು ಹಾಕಿದರು. ಎಲ್ಲರೂ ಚಪ್ಪಾಳೆ ತಟ್ಟಿದರು. ನಾನು ವಿನಯಪೂರ್ವಕವಾಗಿ ಎಲ್ಲರಿಗೂ ನನ್ನ ಕೃತಜ್ಞತೆಯನ್ನು ಹೇಳಿದೆ.

ನಂತರ ಅಲ್ಲಿಂದ ನೇರವಾಗಿ ನೀನಾಳ ಭಾವಚಿತ್ರದೆಡೆಗೆ ಬಂದೆ. ಅದನ್ನು ಸಮೀಪದಿಂದ ನೋಡಿದೆ. ನೀನಾ ಮುಗುಳ್ನಗುತ್ತಿದ್ದಾಳೆ. ನಾನು ಅವಳಿಗೆ ಅವಳ ಇಷ್ಟದ ಗುಲಾಬಿ ಹೂವುಗಳನ್ನು ಅರ್ಪಿಸಿದೆ. ನನ್ನ ಕಣ್ಣುಗಳನ್ನು ಮುಚ್ಚಿ ಅವಳಿಗೆ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸಿದೆ, ‘ಆಮೆನ್... ನಮನಗಳು...’

ಕಣ್ಣಗಳನ್ನು ಮುಚ್ಚಿ ಭಾವಚಿತ್ರದೆದುರು ಸುಮಾರು ಇಪ್ಪತ್ತು ನಿಮಿಷಗಳು ಕೂತಿದ್ದೆ. ಆತ್ಮ–ವಿಸ್ಮೃತಿಯ ಅವಸ್ಥೆಗೆ ಹೋಗಿದ್ದೆ. ನನ್ನ ಕಿವಿಗಳಿಗೆ ದೇವಸ್ಥಾನದ ಗಂಟೆಗಳು, ಶಂಖಗಳ ಮಹಾನಾದ, ಶ್ಲೋಕಗಳ ಧ್ವನಿ, ಭಕ್ತಿಪೂರಿತ ಭಜನೆಗಳು ಮತ್ತು ಹೆಣ್ಣು ಗಂಡಿನ ಕಲೆತ ಧ್ವನಿಗಳು ಪ್ರತಿಧ್ವನಿಸುತ್ತಿವೆ. ಗಣೇಶನಿಗೆ ತಣ್ಣನೆಯ ಹಾಲಿನಿಂದ ಅಭಿಷೇಕ ಮಾಡಿಸಲಾಗುತ್ತಿದೆ, ಅದರ ಹನಿಗಳು ನನ್ನನ್ನು ಸ್ಪರ್ಶಿಸುತ್ತಿವೆ. ಆದರೆ ಅಕಸ್ಮಾತ್ ಎಲ್ಲವೂ ನನ್ನ ಪಾಲಿಗೆ ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆ. ಎಲ್ಲಿಂದಲೋ ಬಂದ ಶೀತಲ ಗಾಳಿ ನನ್ನ ಶರೀರವನ್ನು ಆವರಿಸಿತು. ಪ್ರಕಾಶಪುಂಜವೊಂದು ನನ್ನ ಹೃದಯದೊಳಗೆ ಮಿಂಚಿತು. ಆಗ ಸುಖದ ಅನುಭವವಾಯಿತು!

ದೇವರು ಸಾಕ್ಷಾತ್ ನನ್ನ ಅತಿ ಸಮೀಪದಲ್ಲಿ, ಪರಮ ಶಾಂತಿ ಮತ್ತು ದಿವ್ಯ ಜ್ಯೋತಿಯೊಂದರ ರೂಪದಲ್ಲಿದ್ದಾನೆಂದು ಭಾಸವಾಯಿತು.

(ಮುಗಿಯಿತು)

ಪ್ರತಿಕ್ರಿಯಿಸಿ: feedback@sudha.co.in

## ನಗೆದಿನ ವಿಶೇಷ

### ಮಾತ್ರೆಯ ಮೇನ್ ಎಫೆಕ್ಟ್!

ಡಾ. ಶಿವರಾಂ (ಕೊರವಂಜಿ ಪತ್ರಿಕೆಯ ರಾ.ಶಿ.) ಕ್ಲಿನಿಕ್ ನಡೆಸುತ್ತಿದ್ದ ಕಾಲ. ಒಂದು ದಿನ ಖ್ಯಾತ ಹಾಸ್ಯ ಸಾಹಿತಿ ಬೀಚಿ ಕ್ಲಿನಿಕ್‌ಗೆ ಹೋದರು. ‘ಡಾಕ್ಟ್ರೆ, ಯಾಕೋ ನೆನ್ನೆಯಿಂದ ಜ್ವರ, ತಲೆನೋವು...’

ರಾ.ಶಿ. ನಾಡಿ ಹಿಡಿದು, ನಾಲಿಗೆ ತೆಗೆಸಿ ನೋಡಿ, ಆಮೇಲೆ ಯಾವುದೋ ಒಂದೆರಡು ಮಾತ್ರೆಗಳನ್ನು ಕಾಗದದಲ್ಲಿ ಕಟ್ಟಿ – ‘ತೊಗೊಳ್ಳಯ್ಯ, ಈ ಮಾತ್ರೆಗಳನ್ನ ಈಗೊಂದು, ರಾತ್ರಿ ಒಂದು ನುಂಗು, ಎಲ್ಲಾ ಸರಿಹೋಗುತ್ತೆ’ ಅಂದ್ರು.

ಬೀಚಿ ಮಾತ್ರೆ ತೆಗೆದುಕೊಂಡು ಅಲ್ಲೇ ನಿಂತಿದ್ದರು.

ರಾ.ಶಿ.: ‘ಯಾಕಯ್ಯಾ ಇನ್ನೂ ಇಲ್ಲೇ ನಿಂತಿದ್ದೀಯ? ಇನ್ನೇನಾದ್ರೂ ಕೇಳೋದಿದೆಯಾ?’.

ಬೀಚಿ: ಡಾಕ್ಟ್ರೆ, ಈ ಮಾತ್ರೆಗಳಿಗೆ ಏನೂ ಸೈಡ್ ಎಫೆಕ್ಟ್ ಇಲ್ಲಾ ತಾನೆ?

ರಾ.ಶಿ.: ಯಾವ ಸೈಡ್ ಎಫೆಕ್ಟೂ ಇಲ್ಲ ಹೋಗಯ್ಯ.

ಬೀಚಿ ಮತ್ತೂ ಅಲ್ಲೇ ನಿಂತಿದ್ದರು.

ರಾ.ಶಿ.: ಇನ್ನೇನಯ್ಯ ಮತ್ತೆ? ಬೇರೇನಾದ್ರೂ ಕೇಳೋದಿದೆಯಾ?

ಬೀಚಿಯದು ಅದೇ ಪ್ರಶ್ನೆ. ಇನ್ನೇನಿಲ್ಲ, ಈ ಮಾತ್ರೆಗಳಿಗೆ ಖಂಡಿತವಾಗಿಯೂ ಸೈಡ್ ಎಫೆಕ್ಟ್ ಇಲ್ಲ ತಾನೆ?

ರಾ.ಶಿ. ಅವರಿಗೆ ರೇಗಿಹೋಯಿತು. ‘ಹೋಗಯ್ಯಾ ಬಾಯ್ಮುಚ್ಕೊಂಡು, ಆ ಮಾತ್ರೆಗಳಿಗೆ ಮೇನ್ ಎಫೆಕ್ಟೇ ಇಲ್ಲ, ಸೈಡ್ ಎಫೆಕ್ಟ್ ಎಲ್ಲ್ ಬರಬೇಕು? ಏನಾದ್ರೂ ಹೆಚ್ಚು ಕಡಿಮೆ ಆದರೆ ನಾನಿರ್ತೀನಲ್ಲ, ಬಾ’ ಅಂದ್ರು.

ಬೀಚಿ ಕೂಡಾ ಕಿಲಾಡಿ. ‘ನೀವೇನೊ ಇರ್ತಿರಾ ಡಾಕ್ಟ್ರೆ, ಆದರೆ ನಾನಿರ್ತೀನಾ ಅಂತ?’

ಇಬ್ಬರೂ ಗೊಳ್ ಅಂತ ನಕ್ಕರು.

**–ಪ್ರೊ. ಎಂ. ಕೃಷ್ಣೇಗೌಡ,** ಸಾಹಿತಿ

***

### ಬಾ ಮಚ್ಚಿ ತಿಂಡಿ ತಿನ್ನೋಣ...

ನಾನು ಒಂದು ಹೋಟೆಲ್ ಮಾಡೋಣ ಅಂತ ಇದ್ದೆ. ಅದಕ್ಕೆ ತುಂಬಾ ವಿಶಿಷ್ಟವಾದ ಹೆಸರು ಇಡಬೇಕೆಂದು ಸಾಕಷ್ಟು ತಲೆಕಡಿಸಿಕೊಂಡೆ. ಶಾಸ್ತ್ರ ಕೂಡ ಕೇಳಿ ನೋಡಿದೆ. ‘ಬ’ ಅಕ್ಷರದಲ್ಲಿ ಹೆಸರಿಡಬಹುದು ಅಂತ ಶಾಸ್ತ್ರದಲ್ಲಿ ಬಂತು. ಎಷ್ಟು ಯೋಚನೆ ಮಾಡಿದರೂ ಹೆಸರು ಹೊಳೆಯಲಿಲ್ಲ. ಕೊನೆಗೆ ಒಂದು ಐಡಿಯಾ ಬಂತು. ‘ಫೇಸ್‌ಬುಕ್’ನಲ್ಲಿ ಸ್ಟೇಟಸ್ ಹಾಕಿ, ‘ಬ’ ಅಕ್ಷರದಿಂದ ಹೋಟೆಲ್‌ಗೆ ಆಕರ್ಷಕ ಹೆಸರು ಸೂಚಿಸುವಂತೆ ಜಾಣಜಾಣೆಯರನ್ನು ಕೋರಿಕೊಂಡೆ.

ನನ್ನ ಕೋರಿಕೆಗೆ ಗೆಳತಿಯೊಬ್ಬಳು ಸೂಚಿಸಿದ ಹೆಸರು ಸಖತ್ ಇಷ್ಟವಾಯಿತು. ಆ ಹೆಸರು – ‘ಬಾ ಮಚ್ಚಿ ತಿಂಡಿ ತಿನ್ನೋಣ’. ಆ ಹೆಸರಿಗೆ ಮತ್ತೊಬ್ಬರ ಕಾಮೆಂಟು: ‘ದುಡ್ಡೇನು ನಿಮ್ಮ ಅಪ್ಪ ಕೊಡ್ತಾನಾ...’

**–ಮಂಜುಳಾ ಅಡುಗೂರು,** ನಟಿ

***

### ಹೀರೊಯಿನ್ ಕಥೆ

ನನ್ನದೇ ಒಂದು ಅನುಭವ, ಒಂದು ಕಾರ್ಯಕ್ರಮ. ಅದಕ್ಕೆ ಹೊರಾಂಗಣ ಚಿತ್ರೀಕರಣದ ವ್ಯವಸ್ಥೆಯಾಗಿತ್ತು. ಅದರ ವಿಶೇಷ ಏನೆಂದರೆ, ಸಿನಿಮಾ ಸಾಂಗ್ ಹೇಗಿರುತ್ತೋ ಅದೇ ರೀತಿ ಡ್ರೆಸ್ ಹಾಕಬೇಕು. ಜೊತೆಗೆ ಹೀರೊಯಿನ್ ಪಾತ್ರವನ್ನೂ ಪುರುಷನೇ ಮಾಡಬೇಕು.

ಲಾಂಗ್ ಹೇರ್ ಹಾಕಿಕೊಂಡು ಮಿಡ್ಡಿ ತೊಟ್ಟು, ನೈಸ್ ರೋಡಿನಲ್ಲಿ ಶೂಟಿಂಗ್ ಮಾಡ್ತಾ ಇದ್ವಿ. ನನ್ನ ನೋಡಿ ದೂರದಿಂದ ನೋಡಿದ ಕೆಲವರು ಹೀರೊಯಿನ್ ಅಂತ ಓಡಿ ಬಂದರು. ‘ಮೇಡಂ, ಒಂದು ಸೆಲ್ಫೀ ಸೆಲ್ಫೀ’ ಅಂತ ಜನ ಗೋಗರೆದರು.

ಸೆಲ್ಫಿಗೆಂದು ಹತ್ತಿರ ಬಂದ ನನ್ನನ್ನು ನೋಡಿ, ‘ಯಾರೋ ಒಳ್ಳೆಯ ಹೀರೊಯಿನ್ ಅಂತ ಅನ್ಕಂಡು ಬಂದ್ವಿ ನೋಡುದ್ರೆ ನೀವಾ ಸರ್’ ಅಂತ ಹೇಳಿ ಪೆಚ್ಚು ಮೋರೆ ಹಾಕ್ಕೊಂಡ್ರು. ಕೆಲವರು ಸೆಲ್ಫಿ ಕೂಡ ತಗೊಳ್ದೆ ಹಾಗೇ ಹೋದ್ರು.

**–ಮುದ್ದುಕೃಷ್ಣ,** ನಟ

***

### ನಾಯೀನೆ ಬೆಸ್ಟ್

ಹಚಾ ಹಚಾ ಹಚಾ... ಥೂಥೂ... ಥೂ...

ರಸ್ತೆ ತುಂಬ ನಾಯಿಗಳು! ದೇವರೇ, ಈ ನಾಯಿಗಳಿಗೆ ಅನ್ನ ಹಾಕೋದು, ಈ ನಮ್ಮ ನಾಯಕರಿಗೆ ವೋಟು ಹಾಕೋದು ಎರಡೂ ಒಂದೇ ಅನ್ನುವಂತೆ ಆಗಿದೆಯಪ್ಪ. ಅವ್ರು ಸೀಟು ಸೀಟು ಅಂತ ಗುದ್ದಾಡ್ತಾರೆ. ಇವು ಅನ್ನ ಅನ್ನ ಅಂತ ಕಚ್ಚಾಡ್ತಾವೆ. ಒಂದು ವ್ಯತ್ಯಾಸ ಏನೆಂದರೆ, ನಮ್ಮ ನಾಯಕರಿಗಿಂತ ನಾಯಿಗಳು ಭಾರೀ ಒಗ್ಗಟ್ಟಪ್ಪ. ಒಂದು ನಾಯಿ ಎಲ್ಲೋ ಬೊಗಳಿದರೆ, ಅದರ ಗ್ಯಾಂಗೇ ಬೊಗಳುತ್ತಾ ಬಂದು ಬಿಡುತ್ತೆ.

ಹಂಗೆ ನೋಡಿದ್ರೆ ನಾಯೀನೆ ಬೆಸ್ಟು. ಅನ್ನ ಹಾಕಿದವನು ಯಾವತ್ತಾದರೂ ಸಿಕ್ಕರೆ ಬಾಲ ಅಲ್ಲಾಡಿಸಿ ಹಿಂದೆ ಮುಂದೆ ಬಂದು ಪ್ರೀತಿ ತೋರಿಸುತ್ತವೆ. ಅದೇ ನಾಯಕರು ತಮ್ಮ ತಮ್ಮಲ್ಲೇ ಒಗ್ಗಟ್ಟು ತೋರಿಸಿದ ಉದಾಹರಣೆಯೇ ಇಲ್ಲ. ವೋಟು ಹಾಕಿದ ನಾವೇ ಅವರ ಮನೆ ಬಾಗಿಲಿಗೆ ಹೋಗಿ ನಾಯಿ ಕಾದಂತೆ ಕಾದರೂ ಮುಖದರ್ಶನ ಮಾಡಲ್ಲ...

**–ರಾಘವೇಂದ್ರ ಮೀನನಾಥ,** ನಟ